ಕರ್ನಾಟಕ ವಿಧಾನಸಭೆ

ಶುಕ್ರವಾರ 28ನೇ ಮಾರ್ಚ್ 2003ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ)ಅವರು, ಪೀಠವನ್ನು ಅಲಂಕರಿಸಿದ್ದರು.

ಅಧ್ಯಕ್ಷರು :- ಈಗ ಟರ್ನ್ ಜನತಾ (ಎಸ್) ನವರದು ಇತ್ತು. ಯಾರೂ ಕಾಣಿಸುತ್ತಾ ಇಲ್ಲ, ನಂತರ ಇಂಡಿಪೆಂಡೆಂಟ್ಸ್, ಹೆಗಡೆಯವರೆ ಮಾತನಾಡುತ್ತೀರಾ? ನಮ್ಮ ಮುಂದೆ ಸಮಯ ಇರುವುದು 11.00 ರಿಂದ 1.30 ವರೆಗೆ ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

(1) ಸಭೆಯ ಮುಂದಿಡಲಾದ ಕಾಗದ ಪತ್ರಗಳು

I ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿ) : ಮಾನ್ಯ ಅಧ್ಯಕ್ಷರೆ,

1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ 8(3)ರ ಪ್ರಕರಣದ ಮೇರೆಗೆ:

1) ಕರ್ನಾಟಕ ರಾಜ್ಯ (ನ್ಯಾಯ ವಿಜ್ಞಾನ ಪ್ರಯೋಗಾಲಯ ಸೇವೆಗಳು) (ನೇಮಕಾತಿ) ನಿಯಮಗಳು 2001ಕ್ಕೆ ತಿದ್ದುಪಡಿ ಮಾಡಿ ದಿನಾಂಕ 10-1-2003ರಂದು ಹೊರಡಿಸಲಾದ ಡಿಪಿಎಆರ್:99:ಎಸ್ಆರ್ಡಿ:2002ನೇ ಸಂಖ್ಯೆಯ ಅಧಿಸೂಚನೆ;

2) ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ ಪರಿಶಿಷ್ಟ-1ಕ್ಕೆ ತಿದ್ದುಪಡಿ ಮಾಡಿ ದಿನಾಂಕ 28-1-2003 ರಂದು ಹೊರಡಿಸಲಾದ ಆಇ:1:ಸನಿತಿ: 2000ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

II ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು): ಮಾನ್ಯ ಅಧ್ಯಕ್ಷರೆ,

1964ನೇ ಇಸವಿಯ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮದ 20ನೇ ಪ್ರಕರಣದ ಮೇರೆಗೆ:

ಕರ್ನಾಟಕ ಸಿನಿಮಾ (ನಿಯಂತ್ರಣ) ನಿಯಮ 1971ರ ಕಲಂ 41-ಎಗೆ ವಿನಾಯಿತಿ ನೀಡಿ ಸುಚಿತ್ರ ಸಿನಿಮಾ ಮತ್ತು ಕಲ್ಚರಲ್ ಅಕಾಡೆಮಿ, ಬೆಂಗಳೂರು ರವರಿಗೆ ಬೆಂಗಳೂರಿನ ಲಿಡೋ ಚಿತ್ರಮಂದಿರದಲ್ಲಿ ದಿನಾಂಕ 14-3-2003 ರಿಂದ 20-3-2003 ರವರೆಗೆ ನಿತ್ಯ 5 ಪ್ರದರ್ಶನವನ್ನು ಅಂತರಾಷ್ಟ್ರೀಯ ಚಲನ ಚಿತ್ರೋತ್ಸವ ಆಚರಿಸಲು ಬೆಂಗಳೂರು ಜಿಲ್ಲೆಯ ಜಿಲ್ಲಾಧಿಕಾರಿಗಳ ಸಹಯೋಗದಿಂದ ಸಾಮಾನ್ಯ ಷರತ್ತುಗಳಿಗೊಳಪಟ್ಟು ಪ್ರದರ್ಶಿಸಲು ಅನುಮತಿ ನೀಡಿ ದಿನಾಂಕ 5-3-2003 ರಂದು ಹೊರಡಿಸಲಾದ ಒಸಾಇ:13:ಸಿಎನ್ಎ:2003ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

III ಶ್ರೀ ಮಲ್ಲಿಕಾರ್ಜುನ ಖರ್ಗೆ: (ಪ್ರೊ।।.ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿ) ಅವರ ಪರವಾಗಿ)

1983ರ ಕರ್ನಾಟಕ ಶಿಕ್ಷಣ ಅಧಿನಿಯಮ (1995ರ ಕರ್ನಾಟಕ ಅಧಿನಿಯಮ-1) 145(4)ರ ಪ್ರಕರಣದ ಮೇರೆಗೆ:

1999ರ ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳ (ವಾಣಿಜ್ಯ ಸಂಸ್ಥೆಗಳ ನೋಂದಣಿ ಮತ್ತು ಮಾನ್ಯತೆ) ನಿಯಮಗಳ, ನಿಯಮ 14ಕ್ಕೆ ತಿದ್ದುಪಡಿ ಮಾಡಿ ದಿನಾಂಕ 28-1-2003 ರಂದು ಹೊರಡಿಸಲಾದ ಇಡಿ:4:ಎಲ್‌ಸಿಇ:2002ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

2. ವರದಿಯನ್ನೊಪ್ಪಿಸುವುದು

ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಉಪ ಸಭಾಧ್ಯಕ್ಷರ ಪರವಾಗಿ): ಮಾನ್ಯ ಅಧ್ಯಕ್ಷರೆ, ಖಾಸಗಿ ಸದಸ್ಯರುಗಳ ವಿಧೇಯಕಗಳು ಮತ್ತು ನಿರ್ಣಯಗಳ ಸಮಿತಿಯ ಹತ್ತನೆ ವರದಿಯನ್ನೊಪ್ಪಿಸುತ್ತೇನೆ.

ಅಧ್ಯಕ್ಷರು: ಉಪಾಧ್ಯಕ್ಷರ ಪರವಾಗಿ ಅರ್ಜಿಗಳ ಸಮಿತಿಯ ಎರಡನೆ ವರದಿಯನ್ನೊಪ್ಪಿಸುತ್ತೇನೆ.

ಮಂಡಿಸಲಾಯಿತು.

ಅಧ್ಯಕ್ಷರು: ಈಗಲೇ ಸದಸ್ಯರಿಗೆ ಹೇಳಿಬಿಡುತ್ತೇನೆ. ಈಗ ನಮ್ಮ ಮುಂದೆ ಸಮಯ ಇರುವುದು 11 ರಿಂದ 1.30 ಹಾಗೂ 2.30 ರಿಂದ 5.00 ಗಂಟೆಯವರೆಗೆ ಎಂದರೆ ಒಟ್ಟು ನಾಲ್ಕು ಗಂಟೆ ಇದೆ. ಆ ಸಮಯದಲ್ಲಿ ಸದಸ್ಯರುಗಳು ಸಂಕ್ಷಿಪ್ತವಾಗಿ ಮಾತನಾಡಿ. ಉಳಿದದಂತಹ ಸದಸ್ಯರಿಗೆ ಜೂನ್ ಜುಲೈನಲ್ಲಿ ಅಧಿವೇಶನ ಕರೆದಾಗ ಈಗ ಯಾರ್ಯಾರು ಉಳಿದಿರುತ್ತಾರೆ, ಅವರಿಗೆ ಮೊದಲು ಅವಕಾಶ ಕೊಟ್ಟು ನಂತರ ಬೇರೆಯವರಿಗೆ ಅವಕಾಶ ಕೊಡೋಣ.

3. ವಿತ್ತೀಯ ಕಾರ್ಯಕಲಾಪ

2003-04ನೇ ಸಾಲಿನ ಆಯುವ್ಯಯದ ಮೇಲಿನ ಚರ್ಚೆ

+ ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದ ಆಯವ್ಯಯದ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದನೆಗಳನ್ನು ಅರ್ಪಿಸುತ್ತಾ, ಮಾನ್ಯ ಮುಖ್ಯಮಂತ್ರಿಗಳು ಈ ವರ್ಷದ ಆಯವ್ಯಯವನ್ನು ಏನು ಮಂಡಿಸಿದ್ದಾರೆ, ಅದು ಯಾವ ರೀತಿ ಇದೆ ಎಂದರೆ there is a saying: "She got her good looks from her father who is a plastic surgeon." ವಾಸ್ತವಾಂಶ ಆ ರೀತಿ ಇಲ್ಲ. ಅವರದೆ ಒಂದು ಆಯವ್ಯಯದ ಮೊದಲನೇ ಮತ್ತು ಮೂರನೆ ಪ್ಯಾರಾದಲ್ಲಿ ಏನು ಹೇಳುತ್ತಾರೆ ಎಂದರೆ ನನ್ನ ಸರ್ಕಾರದ ಪ್ರಥಮ ಆಯವ್ಯಯ ಪತ್ರದಲ್ಲಿ ಎಂದರೆ 2000-2001ನೇ ಸಾಲಿನ ಪತ್ರದಲ್ಲಿ 'ನಾನು ನೀಡಿದ್ದ ನೋಟಗಳು ಈಗ ಕಾರ್ಯಕ್ರಮಗಳಾಗಿ ರೂಪು ತಳೆದಿವೆ' ಎಂದರೆ 2000-01ನೇ ಸಾಲಿನದ್ದು ಈಗ ತಿಳಿಯುತ್ತಿದೆ. ಪುನ: ಏನು ಹೇಳುತ್ತಾರೆ, 'ಈ ಹಿಂದಿನ ಮುಂಗಡ ಪತ್ರಗಳಲ್ಲಿ ನಾನು ಜಾಲನೆ, ನೀಡಿದ್ದ ಕಾರ್ಯಕ್ರಮಗಳ ಬಗ್ಗೆ ಎಂದರೆ ಇದು 2001-02 ಕಳೆದ ವರ್ಷದ್ದು ಇನ್ನು ಯಾವುದೂ ಜಾರಿಗೆ ಬಂದಿಲ್ಲ ಎಂದು ಹೇಳುವಂತಹ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆಯವ್ಯಯ ಪತ್ರವನ್ನು ಮಂಡನೆ ಮಾಡುವಾಗ ಹೇಳಿದ್ದಾರೆ. ನಾವು ಎರಡು ವರ್ಷಗಳ ಹಿಂದಿನ ಬರದ ಸಮಸ್ಯೆಯನ್ನು ಎಲ್ಲರೂ ಅರ್ಥಮಾಡಿಕೊಂಡಿದ್ದೇವೆ. ಅದರಿಂದ ಸರ್ಕಾರಕ್ಕೆ ಎಷ್ಟು ತೊಂದರೆಯಾಗಿದೆ. ಹಿಂದೆ ನಾವು ಸರ್ಕಾರದಲ್ಲಿ ಇದ್ದಾಗಲೂ ಬರ ಇತ್ತು. ಆ ತೊಂದರೆಗಳು ಏನು ಎಂಬುದನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. ನಾನು ಏನು ಕೇಳುತ್ತಿದ್ದೇನೆಂದರೆ 157 ತಾಲ್ಲೂಕುಗಳ ಬಗ್ಗೆ ಏನು ಕ್ರಮಗಳನ್ನು ಕೈಗೊಂಡಿದ್ದಾರೆ.